ದಿನಾಂಕ 23-02-2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾವು ಜಿಲ್ಲಾಧಿಕಾರಿಗಳವರಿಂದ ಪಡೆದ ಅನ್ಯಕ್ರಾಂತದ ಆದೇಶದಲ್ಲಿ ಅಂದರೆ ನಿಡಿ 9 ರಲ್ಲಿರುವ ನಿಬಂಧನೆ 7 ರಲ್ಲಿ ವಿನ್ಯಾಸವನ್ನು ಅಭಿವೃದ್ದಿಪಡಿಸಿದ ನಂತರ ಪ್ರಾಧಿಕಾರದ ಅಂತಿಮ ಅನುಮೋದನೆಯನ್ನು ಪಡೆದುಕೊಳ್ಳದೇ ನಿವೇಶನಗಳನ್ನು ಮಾರಾಟ ಮಾಡಬಾರದು ಎಂಬ ಷರತ್ತು ಇದೆ ಎಂದರೆ ನನಗೆ ಗೊತ್ತಿಲ್ಲ. ನಾವು ಅಭಿವೃದ್ದಿಪಡಿಸಿದ ನಿವೇಶನಗಳಿಗೆ ನಗರಾಭಿವೃದ್ದಿ ಪ್ರಾಧಿಕಾರದ ಅನುಮೋದನೆಯನ್ನು ಪಡೆದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ ಅದು ನನ್ನ ತಂದೆಗೆ ಗೊತ್ತಿರುತ್ತದೆ. ತಾಲೂಕ ಸರ್ವೆಯವರು ತಯಾರಿಸಿರುವ ನಿಡಿ 2 ರ ನಕ್ಷೆಯ ಬಗ್ಗೆ ಅನುಮೋದನೆಯನ್ನು ಪಡೆದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. 1985 ಕ್ಕಿಂತ ಪೂರ್ವದಲ್ಲಿ ಮೊದಲು ಅನ್ಯಕ್ರಾಂತ ಆದೇಶವಾದ ನಂತರ ಕೆ.ಜೆ.ಪಿ. ಆಗುತ್ತಿತ್ತು ಎಂದರೆ ಸರಿ. 1985 ಕ್ಕೂ ಮೊದಲು ಅನ್ಯಕ್ರಾಂತ ಆದೇಶ ಮಾಡಿಸಬೇಕಾದರೆ ಖಾಸಗಿ ಸರ್ವೆಯವರ ಮೂಲಕ ಅಳತೆ ಮಾಡಿಸಿ ನೀಡುತ್ತಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ, ದಕ್ಷಿಣೋತ್ತರ ಎಷ್ಟೆಷ್ಟು ಅಡಿ ಬರುತ್ತದೆ ಎಂದು ಗೊತ್ತಿಲ್ಲ, ಆದರೆ ಸಂಪೂರ್ಣ ಅಳತೆ ಗೊತ್ತಿರುತ್ತದೆ. ನಿಡಿ 2 ರಲ್ಲಿ 892 ಅ 2 ಎಂದು ಇರುವುದನ್ನು ದುಂಡುಸುತ್ತಿ 892 ಡ ಎಂಬುದಾಗಿ ತಿದ್ದುಪಡಿ ಮಾಡಲಾಗಿದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಡಿ 2 ರಲ್ಲಿ ತಿದ್ದುಪಡಿಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಯಾವಾಗ ತಿದ್ದುಪಡಿ ಮಾಡಿರುತ್ತಾರೆ ಎಂಬುದರ ಬಗ್ಗೆ ನಿಡಿ 2 ರಲ್ಲಿ ಉಲ್ಲೇಖ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಅದು ಬದಲಾವಣೆ ಮಾಡಲಾಗಿದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ 2 ರ ದಾಖಲೆಯನ್ನು ನಗರಾಭಿವೃದ್ದಿ ಪ್ರಾಧಿಕಾರದ ಇಲಾಖೆಯಿಂದ ಅನುಮೋದನೆಯನ್ನು ಪಡೆಯದೇ ಇರುವ ಕಾರಣ ನಿಡಿ 2 ರ ದಾಖಲೆಗೆ ಯಾವುದೇ ರೀತಿಯ ಕಾನೂನಿನ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಪ್ಲಾಟ್ ನಂ.1 ಎಂಬುದಾಗಿ ಹೇಳುವ ಆಸ್ತಿಯು 47 ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುವ ನಿಡಿ 4 ನ್ನು ವಾದಿಯ ಸಮ್ಮತಿ ಇಲ್ಲದೇ ತೆಗೆದ ಭಾವಚಿತ್ರ

ಎಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ ಪ್ಲಾಟ್ ನಂ.1 ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ತಂಟೇದ ಆಸ್ತಿಯಲ್ಲಿ ವಾದಿಗೆ ಮಾತ್ರ ಹಕ್ಕು ಇದೆ ಎಂದರೆ ಸರಿಯಲ್ಲ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ. ನನ್ನ ಸಮಕ್ಷಮ

ಸಹಿ
ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.